**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 10

**CW**. 11

**ಸಾಕ್ಷಿಯ ಹೆಸರು –ಜಲೇಂದ್ರ**

**ತಂದೆಯ ಹೆಸರು –ಲೇ ಕರಿಗೌಡ**

**ವಯಸ್ಸು –58 ವರ್ಷಗಳು** ದಿನಾಂಕ 05–01–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಹೊಸಅಗ್ರಹಾರ ,ಕೆ ಆರ್ ನಗರ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ಗೋಪಿಕೃಷ್ಣ ಗೊತ್ತು. ಈಗ್ಗೆ 7 ವರ್ಷಗಳ ಹಿಂದೆ ಗೋಪಿಕೃಷ್ಣ ಜಮೀನಿನಲ್ಲಿ ಮರಕ್ಕೆ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾರೆ. ವಿಚಾರ ಗೊತ್ತಾಗಿ ರಾತ್ರಿ 10.00 ಗಂಟೆಗೆ ನಾನು ಸ್ಥಳಕ್ಕೆ ಹೋದೆ. ಪೊಲೀಸರಿಗೆ ಮಾಹಿತಿ ನೀಡಿದ ನಂತರ ಮಧ್ಯರಾತ್ರಿ ಪೊಲೀಸರು ಸ್ಥಳಕ್ಕೆ ಬಂದು, ಮೃತದೇಹವನ್ನು ಕೆಳಗೆ ಇಳಿಸಿದರು. ನಂತರ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–12 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–12(ಬಿ) ಎಂದು ಗುರುತಿಸಲಾಯಿತು. ಪೋಲೀಸರು ಪಂಚನಾಮೆ ಕಾಲಕ್ಕೆ ಫೋಟೋ ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ –13 ಮತ್ತು 14 ಎಂದು ಗುರುತಿಸಲಾಗಿದೆ. ಗೋಪಿಕೃಷ್ಣ ನೇಣು ಹಾಕಿಕೊಳ್ಳಲು ಉಪಯೋಸಿದ ಬಟ್ಟೆಯನ್ನು ಪೋಲೀಸರು ಜಪ್ತಿ ಮಾಡಿದರು. ಮೃತ ಗೋಪಿಕೃಷ್ಣ 1 ನೇ ಆರೋಪಿಯೊಂದಿಗೆ ಯಾವ ರೀತಿ ಜೀವನ ಮಾಡುತ್ತಿದ್ದ ಎಂದು ನಮ್ಮ ಮುಂದೆ ಹೇಳಿಲ್ಲ.

**SC No.437/2022**
**PW. 10**

**ಪಾಟೀಸವಾಲುಃ– ಆರೋಪಿ ಪರ ಶ್ರೀ ವಕೀಲರಿಂದಃ–**

ಪಂಚನಾಮೆಗೆ ಬರಲು ಪೊಲೀಸರು ನೋಟೀಸ್ ನೀಡಿಲ್ಲ ಎಂದರೆ ಸರಿ. ನಿಪಿ–12 ರಲ್ಲಿ ಬರೆದಿರುವ ವಿಚಾರಗಳು ನಾನು ಓದಿ ತಿಳಿದುಕೊಂಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಮೃತನು ನನ್ನ ಸಂಬಂಧಿಕನಾದ ಕಾರಣ ಫಿರ್ಯಾದುದಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.